Therefore, we are bound to consult the High Court and the Public Service Commission.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಮುನ್ಸಿಫ್ ರೆಕ್ರೂಟ್‌ಮೆಂಟ್ ಎಲ್ಲಾ ರಾಜ್ಯಗಳಲ್ಲೂ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮಾಡುತ್ತಾರೆ. ಹೈಕೋರ್ಟಿನವರು ಮಾಡುವುದಿಲ್ಲ. ಹೈಕೋರ್ಟ್‌ನಿಂದ ಒಬ್ಬರು ರೆಪ್ರಸೆಂಟೇಟೀವ್ ಇರುತ್ತಾರೆ.

SRI Y. RAMAKRISHNA.—This is Special Recruitment.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅಧಿಕಾರ ಕೊಡಿ. ಅಲ್ಲಿ ಏನಾದರೂ ಅನ್ಯಾಯವಾದದ್ದು ಕಂಡುಬಂದರೆ ಆಗ ಹೈಕೋರ್ಟಿಗೆ ಹೋಗಬಹುದು.

SRI Y. RAMAKRISHNA.—Those Rules are in existence. We have not repealed those rules.

ಅಧ್ಯಕ್ಷರು.—ಡಾ॥ ಅಂಬೇಡ್ಕರ್ ಅವರು " ಕಾನ್‌ಸ್ಟಿಟ್ಯೂಷನ್ ನಾನಾ ಮಾಡಿದ್ದು, ಅದರ ಫೇರ್‌ಮನ್ ನಾನ್ ಆಗಿದ್ದೆ. ಆದರೆ ಈ ನ್ಯಾಯದ ಬಗ್ಗೆ ನೋಡೋಣ " ಅಂತ ಹೇಳಿದ್ದಾರೆ. ಆದುದರಿಂದ, ನಾವು ನ್ಯಾಯದ ಬಗ್ಗೆ ನೋಡುತ್ತಾ ಇರಬೇಕು.

CALLING ATTENTION TO A MATTER OF URGENT PUBLIC IMPORTANCE

re : Deaths at Tumkur General Hospital due to Tetanus after operation,

SRI SHAFI AHMED,—I call the attention of the Minister for Health & Family Welfare to the 8 deaths at Tumkur General Hospital due to Tetanus after operation.

SRI A. K. ABDUL SAMAD (Hon. Minister for Health).—The Joint Director (Medical) who is also incharge Divisional Joint Director Bangalore, visited the District Hospital, Tumkur on 8th July 1980, and has furnished a detailed report. The facts are as follows :

There were in all six cases of Tetanus detected and treated in the District Hospital, Tumkur in the past one month vide details given in the Annexure. Out of these five cases were operated in the main O. T. between 4th June 1980 and 13th June 1980.

The first case was that of Sri Veeranagappa, 80 years of age of Koratagere Taluk. He was admitted for retention of Urine due to enlarged prostrate, The patient had earlier been treated by some quack doctors and private practitioners for this complaint. He was brought to the District Hospital and admitted on 5th May 1980. He underwent the first stage of operation on 14th May 1980 and the second stage on 4th June 1980. He was progressing well but began to show symptoms of tetanus on 12th July 1980. It is suspected that that he got infected with tetanus during his treatment by the rural quacks prior to admission in the Hospital.

Two of the other cases which had been admitted for delayed labour due to cervical dystocia and placenta praevia. respectively, had also been treated by private doctors before being admitted to the District Hospital. As such any one of these three patients could have been infected by tetanus before admission and thus become the source of infection in the District Hospital.

The main Operation Theatre in the Hospital has been kept closed from 19th June 1980 onwards and necessary steps have been taken to fumigate the premises and sterilise the equipment. Some repairs and repainting of the Operation Theatre have also been carried out. The theatre is expected to be reopened within a week or so.

Meanwhile the Theatre in the I. P. P. Annexure is being used for emergency cases after being fumigated and treated for tetanus spores.

TETANUS CASES DETECTED/TREATED AT DISTRICT HOSPITAL, TUMKUR.

ANNEXURE.

Sl. No.	Name of Patient	Age.	Address	Date of Admission in Hospital	Diagnosis (Disease).	Remarks.
1.	Sri Veeranagappa	80	Dabbahalli, Koratagere Tq.	5-5-1980	Enlarged prostate Retention of Urine	Ist stage operation on 14-5-1980. II Stage Operation on 4-6-1980. Signs of Tetanus noted on 12-6-1980. Discharged against Medical advice on 12-6-1980.
2.	Smt. Narasamma	23	Tumkur	10-6-1980	Delayed labour due to Cervical dystocia.	Operated on 13-6-1980 for Caesarian Section. First signs of Tetanus seen on 18-6-1980. Patient died on 26-6-1980.
3.	Smt. Jayamma	35	Turuvekere	22-6-1980	Placenta Praevia	Operated in I.P.P. Operation Theatre on 23-6-1980-caesarian section. Developed first signs of Tetanus

						on 2-7-1980. Patient was taken home against Medical advice on 3-7-1980.
4.	Smt. Parvathamma	35	Marehalli, Gubbi Taluk.	7-6-1980	Haemorrhoids (Piles)	Operated on 10-6-1980. Developed first signs of Tetanus on 22-6-1980. Discharged on 27-6-1980, cured.
5.	Smt. Puttamma	45	C/o Shivanna, Tumkur.	4-6-1980	Malignant Ovarian Tumkur.	Operated on 12-6-1980. First signs of Tetanus seen on 25-6-1980. Died on 27-6-1980.
6.	Sri. Chikkanna	40	Tumkur.	9-6-1980	Strangulated Hernia.	Operated on 9-6-1980. Discharged on 19-6-1980. Readmitted on 21-6-1980 for signs of Tetanus. Referred to Isolation Hospital, Bangalore.

ಶ್ರೀ ಶಫಿ ಅಹಮದ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವೀರನಾಗಪ್ಪ ಎನ್ನುವವರು ೫ನೇ ಮೇ ೧೯೮೦ ರಲ್ಲಿ ಅಡ್ಮಿಟ್ ಆಗಿದ್ದಾರೆ ಅವರಿಗೆ ಟಿಟನಸ್ ಇತ್ತು ಅಂತ ಹೇಳಿದ್ದಾರೆ. ಇದರ ನಡುಮಧ್ಯೆ ೫-೬ ಟೂಬ್ಯಾಕ್ಟವಿ ಕೇಸಸ್ ಆಗಿದೆ. ಅದು ಮಾನ್ಯ ಮಂತ್ರಿಗಳ ಸ್ಟೇಟ್‌ಮೆಂಟ್ ನಲ್ಲಿ ಇಲ್ಲ. ತುಮಕೂರು ಜನರಲ್ ಆಸ್ಪತ್ರೆ ೩೨೫ ಹಾಸಿಗೆಯನ್ನುಳ್ಳ ಜಿಲ್ಲೆಯ ದೊಡ್ಡ ಆಸ್ಪತ್ರೆ. ಈ ಆಸ್ಪತ್ರೆಯಲ್ಲಿ ಉದಾಹರಣೆಗೆ ಹೇಳಬೇಕು ಅಂದರೆ ಸುಮಾರು ಪ್ರತಿ ದಿವಸ ೧೫೦ ಆಪರೇಷನ್‌ಗಳು ಆಗುತ್ತವೆ. ಆದರೆ ಅಲ್ಲಿ ಇರತಕ್ಕದ್ದು ಒಂದೇ ಆಪರೇಷನ್ ಥಿಯೇಟರ್. ಆದ್ದರಿಂದ ಅಲ್ಲಿರತಕ್ಕ ಜನಸಂಖ್ಯೆಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ತುಮಕೂರಿಗೆ ಒಂದು ಸ್ಪೇರ್ ಆಪರೇಷನ್ ಥಿಯೇಟರ್ ಮತ್ತೆ ಒಂದು ಐಸೋಲೇಷನ್ ವಾರ್ಡ್ ಕಟ್ಟಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲಿಯ ಡಾಕ್ಟರ್ ನೆಗ್ಲಿಜೆನ್ಸಿನಿಂದ ಈ ಟಿಟನಸ್ ಕಾಯಿಲೆ ಪತ್ತೆ ಮಾಡದೆ ೮-೧೦ ಜನರ ಪ್ರಾಣ ಹೋಗಿದೆ. ಇವೊತ್ತು ತುಮಕೂರಿಗೆ ಒಂದು ಸ್ಪೇರ್ ಆಪರೇಷನ್ ಥಿಯೇಟರ್ ಒಂದು ಐಸೋಲೇಷನ್ ವಾರ್ಡ್ ಕಟ್ಟಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದೆ ಇದ್ದಂತ ಒಂದು ವಾರ್ಡ್ ಕ್ಲೋಸ್ ಆಗಿದೆ. ಇದರ ಬಗ್ಗೆ ಯಾವ ವಿಧವಾದ ಕ್ರಮವನ್ನು ತೆಗೆದುಕೊಂಡಿಲ್ಲ. ದಯವಿಟ್ಟು ಇದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಂಡು ತುಮಕೂರು ಜಿಲ್ಲೆಯ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ತುಮಕೂರಿನ ಆಸ್ಪತ್ರೆಯಲ್ಲಿ ನರ್ಸಸ್ ಷಾರ್ಟೇಜ್ ಇದೆ, ಅಲ್ಲಿ ಕ್ಲಾಸ್ ಫೋರ್ ಸರ್ವೆಂಟ್ಸ್ ಇಲ್ಲ. ಇದರಿಂದಾಗಿ ಅಲ್ಲಿ ಸ್ವಚ್ಛತೆ ಇಲ್ಲದೆ ಕಾಯಿಲೆಗಳು ಉಂಟಾಗುತ್ತವೆ. ಸರ್ಕಾರದವರು ಕೂಡಲೇ ಇದರ ಬಗ್ಗೆ ಗಮನ ಕೊಡಬೇಕು. ಇನ್ನು ಈಗ ಸತ್ತಿರತಕ್ಕವರು ಬಹಳ ಬಡ ಜನರು ಇದ್ದಾರೆ. ಗೌರ್ನಮೆಂಟ್ ನೆಗ್ಲಿಜೆನ್ಸಿನಿಂದ ಆಗಿದೆ. ಆದುದರಿಂದ, ಮೇಲ್ಕಂಡ ಕುಟುಂಬದವರಿಗೆ ಸರ್ಕಾರದ ವತಿಯಿಂದ ಕಾಂಪನ್‌ಸೇಷನ್ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ತುಮಕೂರು ಗ್ರೈಂಡ್ ವರ್ಕ್ಸ್ ಬ್ಯಾಂಕಿನವರು ೫ ಲಕ್ಷ ರೂಪಾಯಿ ಗ್ಯಾರಂಟ್ಸ್ ಕೊಟ್ಟಿದ್ದಾರೆ, ಸರ್ಕಾರದವರು ಕೂಡ ಮ್ಯಾಚಿಂಗ್ ಗ್ರಾಂಟ್ಸ್ ಕೊಟ್ಟು ಡೆವಲಪ್‌ಮೆಂಟ್ ವರ್ಕ್ಸ್ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಈ ತರಹ ದುರ್ಘಟನೆಗಳು ನಡೆಯುವುದಕ್ಕೆ ಅವಕಾಶವಿಲ್ಲದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆಂದಾನಯ್ಯ.—ಅಧ್ಯಕ್ಷರೇ, ಸರ್ಜಿಕಲ್ ಇನ್ಸ್‌ಟ್ರುಮೆಂಟ್ ಸ್ಟರ್‌ಲೈಸ್ ಮಾಡದೇ ಆಪರೇಷನ್ ಮಾಡಿದ್ದಾರೆ. ಅನುಭವ ಇಲ್ಲದ ಸರ್ಜನ್ ಆಪರೇಷನ್ ಮಾಡಿದ್ದಾರೆ. ಅವರು ಸರಿಯಾಗಿ ಆಪರೇಷನ್ ಮಾಡಿಲ್ಲ ಸರ್ಜಿಕಲ್ ಇನ್ಸ್‌ಟ್ರುಮೆಂಟ್ ಸ್ಟರ್‌ಲೈಸ್ ಮಾಡದೆ ಆಪರೇಷನ್ ಮಾಡಿರುವುದರಿಂದ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ರಾಂದೇವ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಎರಡು ಸಾವುಗಳಾಗಿದೆ ಎಂದು ಹೇಳಿದ್ದಾರೆ. ಪತ್ರಿಕೆಗಳಲ್ಲಿ ೮ ಸಾವುಗಳಾಗಿದೆ ಎಂದು ಬಂದಿದೆ. ಸಾವು ಬಹಳ ಜಾಸ್ತಿಯಾಗಿದೆ ಆದರ ಬಗ್ಗೆ ಮಾನ್ಯ ಮಂತ್ರಿಗಳು ಕ್ಲಾರಿಫೈ ಮಾಡಬೇಕು. ಇನ್ನು ತುಮಕೂರು ಆಸ್ಪತ್ರೆಯಲ್ಲಿರುವ ಕನಗಾವಿ, ಗೈನಾಕಲಿಜಿಸ್ಟ್ ಅವರಿಗೆ ಕಾಂಗ್ರೆಸ್ (ಐ) ಪಕ್ಷದವರು ಪ್ರದರ್ಶನ ಮಾಡಿ ಹೊಡೆದಿದ್ದಾರೆ ಅಂತ ವಿಚಾರ ಬಂದಿದೆ. ಏತಕ್ಕೆ ಹೀಗೆ ಮಾಡಿದರು. ಆಸ್ಪತ್ರೆಯಲ್ಲಿ ಕೆಲವು ಡಾಕ್ಟರುಗಳು ಕೆಲವು ರಾಜಕಾರಣಿಗಳಿಗೆ ಮಾಮೂಲು ಕೊಡಬೇಕಾಗಿದೆ. ಅದರಿಂದಾಗಿ ಡಾಕ್ಟರುಗಳು ಬೇಸತ್ತು ಆಸ್ಪತ್ರೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂತ ವರದಿ ಬಂದಿದೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ವಿಚಾರ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ನಾಗಪ್ಪ.—ಅಧ್ಯಕ್ಷರೇ, ತುಮಕೂರು ಆಸ್ಪತ್ರೆಯಲ್ಲಿದ್ದ ಡಾಕ್ಟರು ರೋಗಿಗಳಿಗೆ ಸರಿಯಾದ ಟ್ರೀಟ್‌ಮೆಂಟ್ ಕೊಡದೇ ಅವರ ನಿರ್ಲಕ್ಷತೆಯಿಂದ ಈ ರೀತಿ ಆಗಿದೆ. ಈಗ ನಮ್ಮ ಮಂತ್ರಿಗಳು ಏನು ಮಾಹಿತಿ ಒದಗಿಸಿದ್ದಾರೆ. ಶ್ರೀ ವೀರನಾಗಪ್ಪ, ದಬ್ಬೇಹಳ್ಳಿ, ಕೊರಟಗೆರೆ ತಾಲ್ಲೂಕು ಇವರಿಗೆ ೧೪ನೇ ಮೇ ೧೯೮೦ ರಂದು ಫಸ್ಟ್ ಸ್ಟೇಜ್ ಆಪರೇಷನ್ ಆಗಿದೆ, ಸೆಕೆಂಡ್ ಸ್ಟೇಜ್ ಆಪರೇಷನ್ ೪ನೇ ಜೂನ್ ೧೯೮೦ ರಲ್ಲಿ ಆಗಿದೆ ಎಂದು ಹೇಳಿದ್ದಾರೆ. ಇದು ಆದಮೇಲೆ ಅವರಿಗೆ ಟಿಟನಸ್ ಕಾಯಿಲೆ

ಕುರಿತು ಮಾಡಿದ್ದಾರೆ ಅಂತ ಮಾಹಿತಿ ಕೊಟ್ಟಿದ್ದಾರೆ ಇವೊತ್ತು ಕೊರಟಗೆರೆ ತಾಲ್ಲೂಕಿನಲ್ಲಿ ದಬ್ಬೇಹಳ್ಳಿ. ಅಂತ ಇಲ್ಲ. ಈಗ ನಮಗೆ ಒದಗಿಸತಕ್ಕ ಮಾಹಿತಿ ಸುಳ್ಳು ಅಂತ ಹೇಳಿ ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ, ಮಾನ್ಯ ಮಂತ್ರಿಗಳು, ಇದರ ಬಗ್ಗೆ ಒಂದು ಸರಿಯಾದ ಕ್ರಮ ತೆಗೆದುಕೊಂಡು, ಸರಿಯಾದ ಎನ್‌ಕ್ವೈರಿ ಮಾಡಿ, ಪುನಃ ನಮಗೆ ಮಾಹಿತಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಟೆಟೆನಸ್ ಇರುವುದರಿಂದ ಆ ವಾರ್ಡ್‌ನ್ನು ಕ್ಲೀನ್ ಮಾಡ ಬೇಕೆಂದು ಹೇಳಿದ್ದಾರೆ. ಆ ಆಸ್ಪತ್ರೆಯಲ್ಲಿ ಇದು ಒಂದೇ ವಾರ್ಡ್. ಮತ್ತೆ ಇನ್ಯಾವುದಾದರೂ ಎಮರ್ಜೆನ್ಸಿ ರೀತಿಯ ಕೇಸುಗಳು ಬಂದಾಗ ಅಲ್ಟರ್‌ನೇಟೀವ್ ಅರೇಂಜ್‌ಮೆಂಟ್ಸ್ ಏನು ಮಾಡಿದ್ದೀರಿ ? ಮತ್ತೆ ಡಾ. ಕಣಗಾವಿಯವರನ್ನು ಹೊಡೆದಿರುವ ಬಗ್ಗೆ ನಾನು ಆಸ್ಪತ್ರಿನ ದಿವಸ ಅಲ್ಲೇ ಇದ್ದೆ. ದೂರವಾಣಿ ಮಾಡಿದ್ದೆ. ಯಾರೋ ರಾಜಕೀಯ ಪಕ್ಷದ ಕಾರ್ಯಕರ್ತರು ಅಲ್ಲಿಗೆ ಹೋಗಿ, ಆ ವೈದ್ಯರಿಗೂ ಇದಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಈ ರೀತಿ ಕೆಲಸದ ಮೇಲೆ ಇರತಕ್ಕಂತಹ ಸರ್ಕಾರಿ ಅಧಿಕಾರಿಗಳನ್ನು ಹೊಡೆಯುವುದಾದರೆ, ಮತ್ತು ಅದಕ್ಕೆ ರಾಜಕೀಯ ಬೆಂಬಲ ಕೊಡುವು ದಾದರೆ, ಯಾವ ಅಧಿಕಾರ ತನ್ನ ಕೆಲಸವನ್ನು ನಿರ್ಭಯವಾಗಿ ಮಾಡುವುದಕ್ಕೆ ಸಾಧ್ಯ ? ಆದ್ದರಿಂದ ಇದರ ಬಗ್ಗೆ ಅವರು ಏನು ತಪ್ಪು ಮಾಡಿದ್ದಾರೆ ? ಎನ್ನತಕ್ಕಂತಹದ್ದರ ಬಗ್ಗೆ ವಿಚಾರಣೆ ಮಾಡತಕ್ಕಂತ ಹದ್ದು ಬಹಳ ಸಾಧುವಾದುದಾಗಿದೆ. ಅವರು ಪೋಲೀಸಿನವರಿಗೆ ಕಂಪ್ಲೇಂಟ್ ಕೊಡುವುದಕ್ಕೂ ಹೆದರು ತ್ತಿರುತ್ತಾರೆ. ಅಂತಹವರು ಬಂದಂತಹ ರೋಗಿಗಳಿಗೆ ಯಾವ ರೀತಿಯ ಟ್ರೀಟ್‌ಮೆಂಟ್ ಕೊಡುತ್ತಾ ರೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಯಾವ ಡಾಕ್ಟರ್ ಕೂಡ ನಿರ್ಭಯವಾಗಿ ಕೆಲಸ ಮಾಡು ವುದಕ್ಕೆ ಸಾಧ್ಯ ? ಆ ಡಾಕ್ಟರ್‌ಗೆ ರಕ್ಷಣೆಯನ್ನು ಸರ್ಕಾರ ಕೊಡಬೇಕು.

ಶ್ರೀ ಗಂಗಹನುಮಯ್ಯ.—ನಾನು ಕೂಡ ದಿನಾಂಕ ೫ನೇ ಜುಲೈ ೧೯೮೦ ರಂದು ಆಸ್ಪತ್ರೆಗೆ ಹೋಗಿದ್ದೆ. ಆ ದಿವಸ ಮಾಜಿ ಶಾಸಕರಾದ ಗಂಗಪ್ಪನವರು ಅಲ್ಲಿ ಅಡ್ಮಿಟ್ ಆಗಿದ್ದರು. ಅವರನ್ನು ಮಾತನಾಡಿಸಿಕೊಂಡು ಬರುವುದಕ್ಕೆ ಹೋಗಿದ್ದೆ. ನಾನು ಅಲ್ಲಿಗೆ ಹೋಗಿದ್ದಂತಹ ಸಮಯದಲ್ಲಿ ಆಸ್ಪತ್ರೆಯಲ್ಲಿ ಬಹಳ ವಾಸನೆ ಇತ್ತು. ಮತ್ತು ಆಸ್ಪತ್ರೆಯ ಒಳಗಡೆ ಕೂಡ ಶುಚಿ ಇರಲಿಲ್ಲ. ಮತ್ತೆ ಅಲ್ಲಿ ರೋಗಿಗಳೂ ಕೂಡ ಯಾರು ಇರಲಿಲ್ಲ. ನಾನು ಏಕೆ, ಎಂಬುದಾಗಿ ಕೇಳಿದಾಗ, ಇಲ್ಲಿ ಈ ತರಹ ಆಪರೇಷನ್ ಥಿಯೇಟರ್‌ನಲ್ಲಿ ಇರುವಂತಹ ಟೆಟೆನಸ್‌ನಿಂದ ೧೦–೧೫ ಜನ ಸತ್ತು ಹೋಗಿದ್ದಾರೆ–ಎಂಬು ದಾಗಿ ಹೇಳಿದರು. ಇದನ್ನು ನಂಬದ ನಾನೂ ಕೂಡ ಅಲ್ಲಿಯ ಇತರರನ್ನೂ ವಿಚಾರಿಸಿದ್ದೇನೆ, ಆದರೆ ಮಾನ್ಯಮಂತ್ರಿಗಳು ಉತ್ತರವನ್ನು ಸರಿಯಾಗಿ ಕೊಟ್ಟಿಲ್ಲ.ಆ ಆಸ್ಪತ್ರೆಯಲ್ಲಿ ಬಹಳ ತೊಂದರೆಯಾಗಿದೆ.ಮಂತ್ರಿ ಬಡವರ ಯೋಗಕ್ಷೇಮವನ್ನು ವಿಚಾರಿಸತಕ್ಕಂತಹ ವೈದ್ಯಾಧಿಕಾರಿಗಳೂ ಯಾರು ಇಲ್ಲ ಎಂಬುದಾಗಿ ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಬೇಕಾಗುತ್ತದೆ. ಇದುವರೆಗೂ ೧೦–೧೫ ಜನ ಸತ್ತಿದ್ದರೂ ಕೂಡ ಸರ್ಕಾರ ಆ ಕಡೆ ಗಮನ ಹರಿಸಲಿಲ್ಲ. ನಮಗೂ ಕೂಡ ಆಸ್ಪತ್ರೆಗೆ ಹೋಗುವುದಕ್ಕೆ ಭೀತಿಯಾಗುತ್ತದೆ. ಸಾಮಾನ್ಯ ಜನಗಳ ಪ್ರತಿನಿಧಿಯಾಗಿ ಬಂದು ಪ್ರಶ್ನೆಗಳನ್ನು ಕೇಳಿದಾಗ ಸರಿಯಾದಂತಹ ಉತ್ತರವನ್ನು ಹೇಳದಿದ್ದರೆ, ನಾವು ಹೇಗೆ ಹೋಗಿ ನಾಳೆ ಜನಗಳ ಮುಂದೆ ತಲೆ ತೋರಿಸುವುದು. ಸಾಮಾನ್ಯ ಜನಗಳ ಮುಂದೆ ನಾವು ತಲೆ ತಗ್ಗಿಸಬೇಕಾಗುತ್ತದೆ. ದಯಮಾಡಿ ಯಾರು ಈ ವಿಚಾರದಲ್ಲಿ ನಿರ್ಲಕ್ಷ್ಯ ವರ್ತನೆ ಮಾಡಿದ್ದಾರೆ ಅವರು ಯಾರೇ ಇರಲಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

† SRI A. K. ABDUL SAMAD (Minister for Health and Family Welfare).—Mr. Speaker Sir, there were about 30 cases which came for operation in this Ward in Tumkur Hospital. Out of this, only six cases are diagonised as Tetanus The details of these six cases have been given in the annexure to my statement.

There are only four or five deaths because of tetanus which has been imported from outside. The moment Sri Veeranagappa's case was detected as tetanus, the District Surgeen had a meeting with

the Surgeons in the Tumkur Hospital and they have decided that this is the first case and precautionary steps were taken. In the second also, it was later on detected as tetanus and there after they closed the Operation Theatre and shifted to the Theatre in the I.P.P. Annexure. As I have already said, the first case viz., Sri Veeranagappa's was treated by some quack doctors. As pointed out by the hon. member Sri Anadanaiah, there is no case where surgical equipments were not sterilised. I think what he said was not correct.

We have sufficient drugs and injections for tetanus which will last for more than three months. I have not received any complaint that Class IV servants are not being treated.

About the man-handling of Dr. Kankavi, this has no relevance to the subject. However, as the hon. member Sri Ramdev and others have raised this matter, I can assure them that no doctors should be man-handled by any person, no matter to which political party they may belong. If any doctor requires protection I may assure through you Sir, that they will certainly be given protection. This manhandling has got to be definitely discouraged. About hospital cleanliness I will answer separately.

ಶ್ರೀ ಶಫಿ ಅಹಮ್ಮದ್.—ಮಾನ್ಯ ಮಂತ್ರಿಗಳು ತುಮಕೂರಿಗೆ ಭೇಟಿ ಕೊಟ್ಟಿದ್ದಾಗ ಈ ಡಾ. ಕನಗಾವಿಯವರ ಬಗ್ಗೆ ಅಲ್ಲಿನ ಜನ ದೂರನ್ನು ಕೊಟ್ಟಿದ್ದರು. ಕಾರಣ ಏನೆಂದರೆ ನಾರ್ಮಲ್ ಡಿಲವರೀಸ್ ಕೇಸಸ್‌ನಲ್ಲೂ ಅವರನ್ನು ಎದುರಿಸಿ, ಬೆದರಿಸಿ ೨೦೦ ರೂ.ಗಳನ್ನು ತೆಗೆದುಕೊಂಡು ಸಿಜೇರಿಯನ್ ಆಪರೇಷನ್ ಮಾಡುವುದು. ಇದರಿಂದಾಗಿ ಅಲ್ಲಿನ ಜನತೆ ಬೇಸರಪಟ್ಟು ಆ ವೈದ್ಯರ ಮೇಲೆ ಕೈ ಮಾಡಿದರು ಎಂಬುದಾಗಿ ನನಗೂ ಸಹ ತಿಳಿದು ಬಂದಿದೆ. ಆದುದರಿಂದ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳುತ್ತಿದ್ದೇನೆ.

SRI A. K. ABDUL SAMAD.—There are officials who are enquiring into the matter and we will deal with them.

MATTER UNDER RULE 312

re: Shifting of the Godown Proposed to be Constructed in Hubli to Andhra Pradesh.

† ಶ್ರೀ ಎಸ್. ಆರ್. ಬೊಮ್ಮಾಯಿ.—ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಹುಬ್ಬಳ್ಳಿಯಲ್ಲಿ ಒಂದು ಉಗ್ರಾಣವನ್ನು ೨ ಕೋಟಿ ರೂ. ವೆಚ್ಚದಲ್ಲಿ ಕಟ್ಟುವುದಕ್ಕೆ ನಿರ್ಣಯ ಮಾಡಿದ್ದು, ಈ ಬಗ್ಗೆ ಎಲ್ಲಾ ಸಂಗತಿಗಳನ್ನು ಪರಿಶೀಲಿಸಿ ದಕ್ಷಿಣ ಭಾರತದ ಹುಬ್ಬಳ್ಳಿಯಲ್ಲಿ ಮಾಡುವ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದರು. ಈ ಬಗ್ಗೆ ೩೬ ಎಕರೆ ಜಮೀನನ್ನೂ ಸಹಾ ತೆಗೆದುಕೊಂಡಿದ್ದು ಅಲ್ಲಿಗೆ ರೈಲ್ವೇ ಹಳಿಗಳನ್ನು ಹಾಕುವುದಕ್ಕೂ ವ್ಯವಸ್ಥೆ ಮಾಡಲಾಗಿತ್ತು. ಈ ನಿರ್ಣಯವನ್ನು ತೆಗೆದುಕೊಳ್ಳುವಾಗ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳೆರಡಕ್ಕೂ ಅನುಕೂಲಕರವಾಗುವಂತಹ ಸ್ಥಳವಾದ ಹುಬ್ಬಳ್ಳಿಯನ್ನು ಆಯ್ಕೆ ಮಾಡಲಾಯಿತು. ಕಾರವಾರ ಬಂದರೂ ಸಹಾ ಇಲ್ಲಿಗೆ ಸಮೀಪ ಇದ್ದುದರಿಂದ